Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 28-02-2023

**ಪತ್ರಿಕಾ ಪ್ರಕಟಣೆ:**

# ಐಡಿಯಾಥಾನ್ ವಿಜೇತರಿಗೆ ಪುರಸ್ಕಾರ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಏರ್ಪಡಿಸಿದ್ದ ಸೃಜನಶೀಲ "ಐಡಿಯಾಥಾನ್" ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಫೆಬ್ರುವರಿ 28ರಂದು ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಧಾರವಾಡದ ಹೈಯರ್ ಎಜುಕೇಶನ್ ಅಕಾಡೆಮಿಯ ನಿರ್ದೇಶಕರಾದ ಡಾ.ಎಸ್. ಎಂ. ಶಿವಪ್ರಸಾದ್ ಅವರು ಪ್ರಶ್ನಿಸುವ ಮನೋಭಾವದಿಂದ ಆವಿಷ್ಕಾರ ಸಾಧ್ಯ ಎಂದು ಹೇಳಿದರು. ಎಲ್ಲಾ ಆವಿಷ್ಕಾರಗಳಿಗೆ ವಿಜ್ಞಾನವೇ ಮೂಲವಾಗಿದ್ದು, ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಆಸಕ್ತಿ ಹಾಗೂ ಶ್ರದ್ಧೆ ವಹಿಸಿ ನೂತನ ಆವಿಷ್ಕಾರ ಮಾಡಿ ದೇಶದ ಉನ್ನತಿಗೆ ಕಾರಣಿಭೂತರಾಗುವಂತೆ ಕರೆ ನೀಡಿದರು. ಪ್ರತಿಯೊಬ್ಬ ಮಾನವನು ದೈಹಿಕ ಸಾಮರ್ಥ್ಯಎಂಬ ಹಾರ್ಡ್ವೇರ್ ಪಡೆದಿದ್ದು, ಉತ್ತಮ ವಿಚಾರಗಳ ಸಾಫ್ಟ್ವೇರ್ ಅಳವಡಿಸಿಕೊಂಡು ಅಭಿವೃದ್ಧಿಯನ್ನು ಹೊಂದಬೇಕೆಂದು ಹೇಳಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್ ಅವರು ಸತತ ಪ್ರಯತ್ನ ಹಾಗೂ ಸಮರ್ಪಣಾ ಮನೋಭಾವದಿಂದ ಪ್ರಗತಿ ಹೊಂದುವಂತೆ ವಿದ್ಯಾರ್ಥಿಗಳಿಗೆ ಹೇಳಿದರು. ಮಹಾವಿದ್ಯಾಲಯವು ಒದಗಿಸಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ನುಡಿದರು. ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಸಭೀಕರನ್ನು ಸ್ವಾಗತಿಸುತ್ತ ವಿಜ್ಞಾನ ದಿನದ ಮಹತ್ವವನ್ನು ತಿಳಿಸಿದರು. ಡಾ. ಆರ್. ಎಸ್.ಮುನ್ನೊಳ್ಳಿ ಅವರು ವಂದಿಸಿದರು. ಟ್ರೈನಿಂಗ್ ಮತ್ತು ಪ್ಲೇಸ್ಮೆಂಟ್ ವಿಭಾಗದ ಸಂಚಾಲಕರಾದ ಪ್ರೊ . ರಜತ್ ಆಚಾರ್ಯ ನಿರೂಪಿಸಿದರು. ಸಮಾಜೋಪಯೋಗಿ ವಿನೂತನ ಆವಿಷ್ಕಾರ ಕಲ್ಪನೆಯನ್ನು ಐಡಿಯಾಥನ್ ನಲ್ಲಿ ಪ್ರಸ್ತುತಪಡಿಸಿದ ವಿದ್ಯಾರ್ಥಿಗಳಿಗೆ ಮುಖ್ಯ ಅತಿಥಿಗಳು ಇದೇ ಸಂದರ್ಭದಲ್ಲಿ ಬಹುಮಾನ ವಿತರಿಸಿದರು. ಪದವಿ ವಿಭಾಗದಲ್ಲಿ ಕುಮಾರಿ. ಜಿ. ಲಲಿತಾ ಮತ್ತು ಕುಮಾರಿ. ಸಿಮ್ರಾನ್ ಮುಲ್ಲಾ, ಪ್ರೌಢಶಾಲಾ ವಿಭಾಗದಲ್ಲಿ ಪಟ್ಟಣದ ವಿವೇಕಾನಂದ ಪ್ರೌಢಶಾಲೆಯ ವಿದ್ಯಾರ್ಥಿ ಕು. ಮಿಲಿಂದ್ ಶೇಟ್ ಮತ್ತು ಪ್ರಾಥಮಿಕ ಶಾಲಾ ವಿಭಾಗದಲ್ಲಿ ಧಾರವಾಡದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿನಿ ಕುಮಾರಿ. ಖುಷಿ ಎಂ ಡಿ ಸಮಾಜಪಯೋಗಿ ಪರಿಕಲ್ಪನೆಯನ್ನು ಪ್ರಸ್ತುತಪಡಿಸಿ ಪುರಸ್ಕಾರಕ್ಕೆ ಭಾಜನರಾದರು.

ಡಾ. ಎಸ್. ಎಂ. ಶಿವಪ್ರಸಾದ್ ಅವರು ವಿಜ್ಞಾನದ ಮಹತ್ವ ಹಾಗೂ ವೈಜ್ಞಾನಿಕ ಕ್ಷೇತ್ರದಲ್ಲಾಗಿರುವ ಬೆಳವಣಿಗೆಯನ್ನು ತಿಳಿಸಲು "ವಿಜ್ಞಾನದ ಸೌಂದರ್ಯ– ಸೌಂದರ್ಯದ ವಿಜ್ಞಾನ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಈ ಉಪನ್ಯಾಸ ಕಾರ್ಯಕ್ರಮವನ್ನು ಮಹಾವಿದ್ಯಾಲಯದ ಐ. ಐ. ಸಿ. ಯ ಸಂಚಾಲಕರು ಹಾಗೂ ಇ ಆಂಡ್ ಸಿ ವಿಭಾಗದ ಮುಖ್ಯಸ್ಥರಾದ ಡಾ. ಮಹೇಂದ್ರ ದೀಕ್ಷಿತ್ ಅವರು ಸಂಯೋಜಿಸಿದ್ದರು.

ವಿದ್ಯಾರ್ಥಿಗಳು ತಯಾರಿಸಿದ ಯೋಜನಾ ಕಾರ್ಯದ ಪ್ರದರ್ಶನ ಕಾರ್ಯಕ್ರಮ ಅಂಕುರ –2023 ಕ್ಕೆ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ವಿವಿಧ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳು ಈ ಯೋಜನಾ ಕಾರ್ಯ ಪ್ರದರ್ಶನಕ್ಕೆ ಭೇಟಿ ನೀಡಬಹುದಾಗಿದೆ. ಮಾರ್ಚ್ 1 ರ ಸಂಜೆ 5 ಗಂಟೆಯವರೆಗೆ ಯೋಜನಾ ಕಾರ್ಯ ಪ್ರದರ್ಶನ ನಡೆಯಲಿದೆ.

.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal

